ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಷ್ಪತಿ ಜಾತಿ ಮತ್ತು ಜನಾಂಗದ ಕಲ್ಯಾಣ.

೧೭೫. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೫–೮೬, ೧೯೮೬–೮೭ ಮತ್ತು ೧೯೮೭–೮೮ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಜನಾಂಗದ ಕಲ್ಯಾಣ ಕಾರ್ಯಗಳಿಗೆ ವೆಚ್ಚ ಮಾಡಿದ ಹಣವೆಷ್ಟು, ಯಾವ ಯಾವ ಕಲ್ಯಾಣ ಕಾರ್ಯಗಳಿಗಾಗಿ ವೆಚ್ಚ ಮಾಡಲಾಗಿದೆ ?

ಆ) ಯೋಜನಾ ಹಾಗೂ ಯೋಜನೇತರ ಶೀರ್ಷಿಕೆಯಡಿಯಲ್ಲಿ ಮಾಡಿದ ಕೆಲಸವೆಷ್ಟು, ಹಾಗೂ ಅವುಗಳ ವಿವರಗಳನ್ನು ನೀಡುವುದು.

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಈ ಕೆಳಕಂಡಂತೆ ಖರ್ಚು ಮಾಡಲಾಗಿದೆ.—

(ಲಕ್ಷ ರೂ.ಗಳಲ್ಲಿ)

ವರ್ಷ	ಸಮಾಜ ಕಲ್ಯಾಣ ಇಲಾಖೆ	ವಿಶೇಷ ಘಟಕ ಯೋಜನೆ	ಗಿರಿಜನ ಉಪ ಯೋಜನೆ
೧೯೮೫–೮೬	೫೭.೧೮	೬೨.೨೧	೧೨೦.೦೫
೧೯೮೬–೮೭	೬೦.೬೪	೯೬.೮೫	೧೨೪.೯೦
೧೯೮೭–೮೮	೮೨.೮೪	೧೦೩.೫೯	೧೭೭.೩೯

ಆ) ಸಮಾಜ ಕಲ್ಯಾಣ ಇಲಾಖೆಯು ಪ್ರಮುಖವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದ ಶೈಕ್ಷಣಿಕ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸಂತ್ತಿದ್ದು, ಅವುಗಳ ವಿವರ ಈ ಕೆಳಕಂಡಂತೆ ಇದೆ.

೧) ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯ	—	೩೪
೨) ಆಶ್ರಮ ; ವಸತಿ ಶಾಲೆಗಳು	—	೧೬
೩) ನರ್ಸರಿ ಮತ್ತು ಮಹಿಳಾ ಕಲ್ಯಾಣ ಕೇಂದ್ರಗಳು	—	೪೮
೪) ಹೊಲಿಗೆ ತರಬೇತಿ ಕೇಂದ್ರಗಳು	—	೨
೫) ಹೊಲಿಗೆ ಉತ್ಪಾದನಾ ಘಟಕ	—	೧
೬) ತೆಂಗಿನ ನಾರಿನ ಉತ್ಪನ್ನಗಳ ಘಟಕ	—	೦
೭) ಕಾಲೇಜು ವಿದ್ಯಾರ್ಥಿನಿಲಯ	—	೧

ಇದಲ್ಲದೆ, ಈ ಕೆಳಕಂಡ ವಿವಿಧ ವಿದ್ಯಾರ್ಥಿವೇತನಗಳು ಮತ್ತು ಪ್ರೋತ್ಸಾಹಕ ಯೋಜನೆಗಳನ್ನು ಇಲಾಖೆಯು ಜಾರಿಗೊಳಿಸುತ್ತಿದೆ.

ಯೋಜನೆ	ಪ್ರಯೋಜನ ಪಡೆದವರ ಸಂಖ್ಯೆ.
೧) ಮೆಟ್ರಿಕ್‌ಪೂರ್ವ ವಿದ್ಯಾರ್ಥಿವೇತನ	೧೨ ೫೬೭
೨) ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ	೧,೪೪೬
೩) ಅರ್ಹತಾ ವಿದ್ಯಾರ್ಥಿವೇತನ	೬೪೯
೪) ಅನೈರ್ಮಲ್ಯ ವೃತ್ತಿಯಲ್ಲಿರುವವರ ಮಕ್ಕಳಿಗೆ ವಿದ್ಯಾರ್ಥಿವೇತನ	೭
೫) ಎಸ್. ಎಸ್. ಎಲ್. ಸಿ. ಪ್ರಥಮ ದರ್ಜೆ ವಿದ್ಯಾರ್ಥಿಗಳಿಗೆ ಬಹುಮಾನ	೩೫
೬) ಕಾಲೇಜು ವಿದ್ಯಾರ್ಥಿಗಳಿಗೆ ಬಹುಮಾನ	೨೨
೭) ಆರ್ಥಿಕ ಸೌಲಭ್ಯಗಳು	೧೧೦
೮) ಅಂತರ ಜಾತಿ ವಿವಾಹಿತ ದಂಪತಿಗಳಿಗೆ ಬಹುಮಾನ	೧೫

ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಲ್ಲಿ ಪ್ರಯೋಜನವಾದ ಕುಟುಂಬಗಳ ವಿವರ ಕೆಳಕಂಡಿಂತಿದೆ.

ವರ್ಷ	ವಿಶೇಷ ಘಟಕ ಯೋಜನೆ	ಗಿರಿಜನ ಉಪ ಯೋಜನೆ
೧೯೮೫-೮೬	೫೭೮೩	೪೨೮೪
೧೯೮೬-೮೭	೩೬೫೮	೩೦೫೦
೧೯೮೭-೮೮	೨೬೮೬	೨೯೯೩

ದಕ್ಷಿಣ ಕನ್ನಡ ಬೀಡಿ ಕಾರ್ಮಿಕರ ಬಗ್ಗೆ.

೧೭೧೧. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಬೀಡಿ ಕಾರ್ಮಿಕರು, ಬೀಡಿ ಮಾಲೀಕರು, ಬೀಡಿ ಗುತ್ತಿಗೆದಾರರ ಸಂಖ್ಯೆ ಎಷ್ಟು ?

೨) ದಕ್ಷಿಣ ಕನ್ನಡ ಬೀಡಿ ಕಾರ್ಮಿಕರಿಗೆ ಕೇರಳದಂತೆ ಸಾವಿರ ಬೀಡಿಗೆ ೧೫,೦೦ ರೂ. ಮಜೂರಿ ಕೊಡಲು ಎಂದಿನಿಂದ ಜಾರಿಗೊಳಿಸಲಾಗುವುದು ?

೩) ಬೀಡಿ ಗುತ್ತಿಗೆದಾರರಿಗೆ ಕಾರ್ಮಿಕರಿಗೆ ಕೊಡುವ ಎಲ್ಲಾ ಸವಲತ್ತುಗಳನ್ನು ಕೊಡಲಾಗುತ್ತಿದೆಯೇ ?

೪) ಬೀಡಿ ಕಾರ್ಮಿಕರಿಗೆ ವಸತಿಗಾಗಿ ಮನೆಗಳನ್ನು ಕಟ್ಟಿಸಿಕೊಡುವ ಯೋಜನೆ ಈಗ ಯಾವ ಹಂತದಲ್ಲಿದೆ ?

ಶ್ರೀ ಎಸ್. ಕೆ. ಕಾಂತ (ಕಾರ್ಮಿಕ ಸಚಿವರು).—

೧) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಅ) ಬೀಡಿ ಕಾರ್ಮಿಕರ ಸಂಖ್ಯೆ : ೩,೧೬,೯೬೫
ಆ) ಬೀಡಿ ಮಾಲೀಕರ ಸಂಖ್ಯೆ : ೧,೨೪೦
ಇ) ಬೀಡಿ ಗುತ್ತಿಗೆದಾರರ ಸಂಖ್ಯೆ : ೩ ೭೦೦